9. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ:– ಘಟಪ್ರಭಾ ನದಿಗೆ ಹಿಡಕಲ್‌ನಿಂದ ಒಂದೂವರೆ ಟಿ.ಎಂ.ಸಿ ನೀರನ್ನು ಕುಡಿಯುವ ಉದ್ದೇಶಕ್ಕೆ ಬಿಡುವ ಬಗ್ಗೆ

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):– ಮಾನ್ಯ ಅಧ್ಯಕ್ಷರೆ, ಘಟಪ್ರಭಾ ನದಿಯಲ್ಲಿ ಕಲುಷಿತ ಹಾಗೂ ವಿಷಯುಕ್ತ ನೀರು ಬಂದು ಮಲಿನವಾಗಿದ್ದು, ನೀರೆಲ್ಲಾ ವಿಷವಾಗಿದೆ. ಮೀನುಗಳು, ಕಪ್ಪೆಗಳು, ದನ–ಕರುಗಳು ಸತ್ತಿವೆ. ಅದಕ್ಕಾಗಿ ಕುಡಿಯುವ ನೀರಿಗೋಸ್ಕರ ಒಂದೂವರೆ ಟಿ.ಎಂ.ಸಿ. ನೀರನ್ನು ಹಿಡಕಲ್‌ನಿಂದ ಬಿಡಬೇಕು. ಇದು ಕುಡಿಯುವ ನೀರಿನ ಸಮಸ್ಯೆಯಲ್ಲವೇ clear ಮಾಡಿ.

ಅಧ್ಯಕ್ಷರು:– ಘಟಪ್ರಭಾ ನದಿ ನೀರು ಕಲುಷಿತವಾಗಿ ಮೀನುಗಳೆಲ್ಲಾ ಸತ್ತು ಹೋಗಿವೆ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ.ಬಿ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು):– ಅಲ್ಲಿ ಮೀನುಗಳು ಸತ್ತಿರುವುದಕ್ಕೆ ಬೇರೆ ಕಾರಣವಿದೆ. ಯಾವುದೋ ಒಂದು ಶುಗರ್ ಫ್ಯಾಕ್ಟರಿಯಿಂದ ಕಲುಷಿತ ನೀರು discharge ಆಗಿ ಮೀನು ಸತ್ತುಹೋಗಿವೆ.

ಶ್ರೀ ಗೋವಿಂದ ಎಂ. ಕಾರಜೋಳ:– ಕುಡಿಯುವುದಕ್ಕೆ ನೀರು ಬೇಕಲ್ಲವೇ?

ಶ್ರೀ ಎಂ.ಬಿ. ಪಾಟೀಲ್:– ಎಷ್ಟು ನೀರಿದೆ ಎಂದು ಪರಿಶೀಲನೆ ಮಾಡಿ.....

ಶ್ರೀ ಗೋವಿಂದ ಎಂ. ಕಾರಜೋಳ:– ಪರಿಶೀಲನೆ ಅಲ್ಲ ಒಂದು ವಿಷಯವನ್ನು ತಮಗೆ ಹೇಳುತ್ತೇನೆ. ಮೂರು ಟಿ.ಎಂ.ಸಿ. ನೀರು ನಮಗೆ ಕುಡಿಯುವ ನೀರಿಗೆ reserve ಆಗಿದೆ.

ಅಧ್ಯಕ್ಷರು:– ಕುಡಿಯುವ ನೀರನ್ನು ಬಿಡುತ್ತಿರೋ ಇಲ್ಲವೋ ಹೇಳಿ.

ಶ್ರೀ ಎಂ.ಬಿ. ಪಾಟೀಲ್:– ನೀರಿನ availability ಯನ್ನು ನೋಡಿಕೊಂಡು ನಿರ್ಧಾರ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ನೀರನ್ನು ಬಿಡಬೇಕು, ಬಿಡಲಿಲ್ಲವೆಂದರೆ ಜನರು ಎಲ್ಲಿಗೆ ಹೋಗಬೇಕು.....

(ಗೊಂದಲ)

ಅಧ್ಯಕ್ಷರು:– ಶ್ರೀ ಕಾರಜೋಳರವರೆ ಐದು ನಿಮಿಷ. ಮಾನ್ಯ ಸಚಿವರೆ ಏನು ಹೇಳುತ್ತಿರೋ ಹೇಳಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– Water availability ಯನ್ನು ನೋಡಬಾರದೆ? ನೀರಿನ availability ಎಷ್ಟಿದೆಯೆಂದು ನೋಡಿಕೊಂಡು ಮಾಡುತ್ತೇವೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಅವರು ನೀರನ್ನು ಬಿಡಬೇಕು. ಇಲ್ಲವಾದರೆ ಅನಿವಾರ್ಯ. ಜನ ನೀರಿಲ್ಲದೆ ಸಾಯುತ್ತಾರೆ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಾವು ನೀರಿನ ಲಭ್ಯತೆ ನೋಡಿಕೊಂಡು decision ತೆಗೆದುಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು:– ನೀವು ನೀವೇ ಮಾತನಾಡಬೇಡಿ. ನೀವು ಸುಮ್ಮನೆ ಕುಳಿತುಕೊಳ್ಳಿ. ಆಗುವುದಾದರೆ ಆಗುತ್ತದೆ ಇಲ್ಲವಾದರೆ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:– ಸರ್ಕಾರಕ್ಕೆ ಜವಾಬ್ದಾರಿಯಿಲ್ಲವೆಂದು ನಿನ್ನೆಯೇ ನಾನು ನೋಟಿಸ್ ಕೊಟ್ಟಿದ್ದೇನೆ. ಅದು ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ಎಂ.ಬಿ. ಪಾಟೀಲ್:– ಇದು ನನಗೆ ಈಗ ಬಂದಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಗೋವಿಂದ ಎಂ. ಕಾರಜೋಳರವರು ಬಾವಿಯಲ್ಲಿ ಧರಣಿ ನಿರತರಾದರು)

10. 2014–15 ನೇ ಸಾಲಿನ ಆಯವ್ಯಯದ ಮೇಲೆ ಮುಂದುವರಿದ ಸಾಮಾನ್ಯ ಚರ್ಚೆ

ಶ್ರೀ ಎಸ್. ಚಿಕ್ಕಮಾದು (ಹೆಚ್.ಡಿ.ಕೋಟೆ):– ಮಾನ್ಯ ಅಧ್ಯಕ್ಷರೆ, 2014–15ನೇ ಸಾಲಿನ ಆಯವ್ಯಯ ಪತ್ರದ ಮೇಲೆ ಮಾತನಾಡಲು ಅವಕಾಶ ನೀಡಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತಾ, ನಾನು ಹೆಚ್ಚಿಗೆ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಸಲಹೆಗಳ ರೂಪದಲ್ಲಿ ಮಾತನಾಡುತ್ತೇನೆ. 2014–15ನೇ ಸಾಲಿನ ಆಯವ್ಯಯವನ್ನು ಮಂಡಿಸಿದ್ದು, ಅದರಲ್ಲಿ ಉತ್ತಮವಾದ ಕಾರ್ಯಕ್ರಮಗಳನ್ನು ಮಂಡಿಸಿರುವುದಕ್ಕೆ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಅದರಲ್ಲಿ ಕೆಲವು ಮಾರ್ಪಾಡುಗಳನ್ನು ಸರ್ಕಾರ ಮಾಡಿಕೊಳ್ಳಬೇಕಾಗುತ್ತದೆ. ಇದುವರೆವಿಗೂ ಆಯವ್ಯಯದ ಮೇಲೆ ನಮ್ಮ ಗೌರವಾನ್ವಿತ ಸದಸ್ಯರುಗಳು ಮಾತನಾಡಿದ್ದಾರೆ. ಎಲ್ಲರ ದೃಷ್ಟಿಕೋನವೇನೆಂದರೆ ಸರ್ಕಾರ ಯಾವುದೇ ಕಾರ್ಯಕ್ರಮಗಳನ್ನು ಜಾರಿಗೆ ತಂದಂತಹ ಸಂದರ್ಭದಲ್ಲಿ ಅದನ್ನು ಅನುಷ್ಠಾನಗೊಳಿಸುವುದು ನಮ್ಮ ಸರ್ಕಾರಿ ಅಧಿಕಾರಿಗಳು. ಅಧಿಕಾರಿಗಳು ನಿಷ್ಠೆಯಿಂದ ಆ ಕಾರ್ಯಕ್ರಮಗಳನ್ನು ಜಾರಿಗೆ ತಂದರೆ ಸರ್ಕಾರದ ಉದ್ದೇಶದಲ್ಲಿ ಫಲ ಸಿಗುತ್ತದೆ ಮತ್ತು ಸರ್ಕಾರ ಏನು ಕಾರ್ಯಕ್ರಮವನ್ನು ಜಾರಿಗೆ ತರುವುದೋ ಅದು ನೇರವಾಗಿ ಫಲಾನುಭವಿಗಳಿಗೆ ದೊರಕುವ ಅವಕಾಶವಾಗುತ್ತದೆ. ನಾನು ಎಲ್ಲಾ ಅಧಿಕಾರಿಗಳನ್ನು blame ಮಾಡುವುದಿಲ್ಲ. ಕೆಲವೊಂದು ಅಧಿಕಾರಿಗಳು ಸಮಸ್ಯೆಗಳು ಬಂದಾಗ ಆ ಸಮಸ್ಯೆಗೂ ಅವರಿಗೂ ಸಂಬಂಧವೇ ಇಲ್ಲದ